10.01.2020

ಸಾಕ್ಷಿ ಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಜಿ ಜಿ ವಕೀಲರಿಂದಃ

ಸಾಕ್ಷಿಗೆ ಸರ್ವೆ ಸಂಖ್ಯೆ 13 ಜಮೀನಿಗೆ ಸಂಬಂದಿಸಿದಂತೆ ಪಹಣಿಪತ್ರಿಕೆ ತೋರಿಸಿ ಅದರಲ್ಲಿ 0.18 ಗುಂಟೆ ಖರಾಬಿಗೆ ಹೋಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ಒಪ್ಪುತ್ತಾರೆ, ಹಾಗಾಗಿ ಅದನ್ನು ನಿಪಿ 45 ಎಂದು ಗುರುತಿಸಲಾಯಿತು. ದಾವ ಸರ್ವೆ ಸಂಖ್ಯೆ 15 ರ ದಕ್ಷಿಣ ದಿಕ್ಕಿಗೆ ಬಿಎಂ ರಸ್ತೆ ಹಾದು ಹೋಗುತ್ತದೆ ಎಂದರೆ ಸರಿಯಲ್ಲ. ನಿಪಿ 44 ರಲ್ಲಿ ಉತ್ತರ ದಿಕ್ಕಿಗೆ ಸರ್ವೆ ಸಂಖ್ಯೆ 14, 19, ಪೂಃ ಸರ್ವೆ ಸಂಖ್ಯೆ 10, ಪಃ ಸರ್ವೆ ಸಂಖ್ಯೆ 9, ಹಾಗೂ ದಃ 2 ಈ ಮಧ್ಯೆದಲ್ಲಿ ಊರು ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ಒಪ್ಪುತ್ತಾರೆ. ಊರಿನ ಉತ್ತರ ದಿಕ್ಕಿಗೆ ಬಿ ಎಂ ಹಾದು ಹೋಗಿರುವುದು ಉಲ್ಲೇಖ ಇರುತ್ತದೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಮ್ಮ ಮಸೀದಿಗೆ ದಾನ ಮಾಡುವಾಗ ಸ್ವತ್ತು ನಿವೇಶನ ಆಗಿದ್ದು ಗ್ರಾಮ ಠಾಣಕ್ಕೆ ಒಳಪಟ್ಟಿರುತ್ತದೆ. ಸದರಿ ದಾನವನ್ನು ಸ್ವೀಕರಿಸಿದ ಬಗ್ಗೆ ನಮ್ಮ ಮಸೀದಿಯ ಕಮಿಟಿಯಲ್ಲಿ ರೆಸಲ್ಯೂಶನ್ ಕೂಡ ಮಂಜೂರು ಮಾಡಲಾಗಿರುತ್ತದೆ. ಈವರೆಗೂ ಕೂಡ ದಾನವಾದ ನಿವೇಶನದಲ್ಲಿ ಮಸೀದಿ ನಿರ್ಮಿಸಿರುವುದಿಲ್ಲ. 4, 5 ನೇ ಪ್ರತಿವಾದಿಗಳಿಗೆ ಮೇಲೆ ಹೇಳಿದ ನಿವೇಶನದ ಮೇಲೆ ಹಕ್ಕು ಸ್ವಾದೀನ ಮಾಲೀಕತ್ವ ಇರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಅವರು ಯಾವುದೇ ವಿಧವಾದ ದಾನಪತ್ರ ಕೂಡ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ವಾದಿಯ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ನಾನು ಪ್ರತಿವಾದಿಯೊಡನೆ ಶಾಮೀಲಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಗೆ ಸರ್ವೆ ಸಂಖ್ಯೆ 15 ರಲ್ಲಿ 1.30 ಗುಂಟೆ ಜಮೀನಿದೆ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ತಿಳಿದುಕೊಳ್ಳಲು ಪ್ರಯತ್ನಪಟ್ಟಿಲ್ಲ. ಮಸೀದಿಗೆ ಸೇರಿದ ಖಾಲಿ ನಿವೇಶನವು ನನ್ನ ಹೆಸರಿನಲ್ಲಾಗಲೀ ಅಥವಾ ನನ್ನ ತಂದೆ ಹೆಸರಿನಲ್ಲಾಗಲೀ ಖಾತೆ ಆಗಿಲ್ಲ. ವಾದಿಯು ಈ ದಾವೆಯನ್ನು ಯಾವ ಸರ್ವೆ ಸಂಖ್ಯೆ ಗೆ ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮೇಲೆ ಹೇಳಿದ ಚಕ್ಕುಬಂದಿ ಒಳಗಿರುವ ಸ್ವತ್ತು ವಾದಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ನಾನು ಹಾಗೂ ಮಸೀದಿಯು ಸದಸ್ಯರುಗಳು ಗುಂಪು ಕಟ್ಟಿಕೊಂಡು ವಾದಿ ಸ್ವಾದೀನಕ್ಕೆ ತೊಂದರೆ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಮಸೀದಿ ಕಮಿಟಿಯಲ್ಲಿ ಮಾಡಿಕೊಂಡಿರುವ ರೆಸಲ್ಯೂಶನ್ ನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ವಾದಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವಾ ೆಯ ವಿದ್ಯಾಮಾನಗಳು ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ ನ್ಯಾ ನ ಉ ಬೆ ಮಾ

ಓ ಹೇ ಕೇ ಸ ಇ ಒ

ಸಿ.ನ್ಯಾ ಹಾಗೂ ಪ್ರ.ವ.ನ್ಯಾದಂ.
ಪಿರಿಯಾಪಟ್ಟಣ